SARVA SHIKSHANA ABHIYANA
Let us Learn – Let us Grow

## Sarva Shiksha Abhiyana-Karnataka

O/o State Project Director, K.R.Circle, Nrupatunga Road,
Bangalore-560 001

# SSA
# CIVIL WORKS

## FOR THE YEAR 2010-11 RTE

## &

## FOR THE YEAR 2011-2012

## ESTIMATES ARE PREPARED BASED ON KPWD SR – BANGALORE CIRCLE.

1. NEW SCHOOL BUILDING.
   ESTIMATED COST FOR RS.9.0 LAKHS.
   (2007-08-SR)

2. ADDITIONAL CLASS ROOM FOR NEW U P S.
   ESTIMATED COST FOR RS.9.20 LAKHS
   (2010-11 SR)

3. ADDITIONAL CLASS ROOM.
   ESTIMATED COST FOR RS.4.60 LAKHS.
   (2010-11-SR)

4. HEAD MASTER ROOM.
   ESTIMATED COST FOR RS.4.60 LAKHS.
   (2010-11-SR)

5. TRINING FACILITY IN B R C
   ESTIMATED COST FOR RS.5.00 LAKHS.
   (2010-11-SR)

6. GIRLS TOILET.
   ESTIMATED COST FOR RS 1.85 LAKHS.
   (2010-11-SR)

7. COMMON TOILET.
   ESTIMATED COST FOR RS 0.25 LAKHS.
   (2007-08-SR)

8. DRINKING WATER FACILITY
   ESTIMATED COST FOR RS 0.25 LAKHS.
   (2010-11-SR)

SARVA SHIKSHANA ABHIYANA
Let us Learn – Let us Grow

# ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಕೆ.ಆರ್. ವೃತ್ತ, ನೃಪತುಂಗ ರಸ್ತೆ, ಬೆಂಗಳೂರು-560 001

---

ಸಂಖ್ಯೆ:ಸ.ಶಿ.ಅ./ಸಿ.ಕಾ/CW-195/Vol-III/2010-11 ದಿನಾಂಕ: 12-09-2011.

## ಸುತ್ತೋಲೆ

ವಿಷಯ: 2010-11ನೇ ಆರ್.ಟಿ.ಇ ಮತ್ತು 2011-12ನೇ ಸಾಲಿನಲ್ಲಿ ಮಂಜೂರಾದ ಕಾಮಗಾರಿಗಳ ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ: 1. 2010-11ನೇ ಆರ್.ಟಿ.ಇ ಅನುಮೋದನೆಗೊಂಡ ದಿನಾಂಕ 11.10.2010 ಮತ್ತು 2011-12ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಅನುಮೋದನೆಗೊಂಡ ದಿನಾಂಕ: 28.02.2011.

2. ಈ ಕಛೇರಿಯ ಪತ್ರದ ಸಂಖ್ಯೆ: ಸಶಿಅ/ಸಿ.ಕಾ/ಡಿ.ಐ.ಸಿ ಸಭೆ/ಸಿಡಬ್ಲು-324/2011-12 ದಿನಾಂಕ 03-09-2011

3. ಈ ಕಛೇರಿಯ ಪತ್ರದ ಸಂಖ್ಯೆ:ಸಶಿಅ/ಸಿ.ಕಾ/195/ಎಸ್ಟಿಮೇಟ್/Vol-3/2011-12 ದಿನಾಂಕ 03-09-2011

*********

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2010-11ನೇ ಆರ್.ಟಿ.ಇ ಮತ್ತು 2011-12ನೇ ಸಾಲಿನಲ್ಲಿ ಕಾಮಗಾರಿಗಳು ಎಂ.ಹೆಚ್.ಆರ್.ಡಿ.ಯಿಂದ ಮಂಜೂರಾಗಿರುತ್ತದೆ. ಜಿಲ್ಲಾವಾರು ವಿವರವನ್ನು ಅನುಬಂಧ-1 ಮತ್ತು ಅನುಬಂಧ-2 ರಲ್ಲಿ ಒದಗಿಸಿದೆ. ಸದರಿ ಕಾಮಗಾರಿಗಳ ಅನುಷ್ಠಾನಗೊಳಿಸುವ ಪೂರ್ವದಲ್ಲಿ ಡಿ.ಐ.ಸಿ ಸಭೆಯನ್ನು ದಿನಾಂಕ 30-09-2011ರೊಳಗೆ ನಡೆಸದಿದ್ದಲ್ಲಿ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅನುಮೋದನೆಗೊಂಡಂತೆ ಅನುಷ್ಠಾನಗೊಳಿಸಲು ಉಲ್ಲೇಖ (2)ರ ಪತ್ರದಲ್ಲಿ ಡಿ.ಐ.ಸಿ ನಡೆಯದಿರುವ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯಿತಿ ರವರಿಗೆ ಪತ್ರವನ್ನು ಬರೆಯಲಾಗಿದೆ.

2010-11ನೇ ಸಾಲಿನಲ್ಲಿ ಬಾಕಿ ಇದ್ದ ಕಾಮಗಾರಿಗಳನ್ನು (Spill over)ಗಳನ್ನು ಯಾವಶಾಲೆಗೆ ಅನುಮೋದನೆಯಾಗಿತ್ತೋ ಅದೇ ಶಾಲೆಗಳಿಗೆ ಬಳಸಬೇಕಾಗಿದೆ. ಅದಕ್ಕೆ ಯಾವುದೇ ಬಗೆಯ ಅನುಮತಿಯು ಅವಶ್ಯಕವಿರುವುದಿಲ್ಲ. ಕೂಡಲೇ ಕಾಮಗಾರಿಗಳನ್ನು ಪ್ರಾರಂಭಿಸಿ ಪೂರ್ಣಗೊಳಿಸುವುದು.

1) **ಹೊಸ ಶಾಲಾ ಕಟ್ಟಡ:** 2010-11 ನೇ ಆರ್.ಟಿ.ಇ ಯೋಜನೆಯಡಿಯಲ್ಲಿ ಮಾತ್ರ ಮಂಜೂರಾಗಿರುತ್ತದೆ. ಕಟ್ಟಡದ ನಿರ್ಮಾಣದ ಘಟಕ ವೆಚ್ಚ ರೂ. 9.00ಲಕ್ಷಗಳು. ಈ ಅನುದಾನವನ್ನು 2010-11ನೇ ಆರ್.ಟಿ.ಇ ಸಾಲಿನ ಯೋಜನೆಯಲ್ಲಿ ಮಂಜೂರಾದ ಹೊಸ ಶಾಲೆಗಳಿಗೆ ಮಾತ್ರ ಬಳಸಬೇಕಾಗಿರುತ್ತದೆ. 2010-11ನೇ ಸಾಲಿನಲ್ಲಿ ಪ್ಲಾನ್ ಮತ್ತು ಎಸ್ಟಿಮೇಟನ್ನು ಬಳಸಬೇಕು. ಇದರಲ್ಲಿ ಶೇ.3 ರಷ್ಟು ಅನುದಾನ 3ನೇ ವ್ಯಕ್ತಿ (QA &TA) ಗಾಗಿ ರೂ 29540-00 ಕಟಾಯಿಸಿ ಉಳಿದ ಮೊತ್ತ ರೂ.8,70,460-00 ಗಳನ್ನು ಎಸ್.ಡಿ.ಎಂ.ಸಿರವರ ಖಾತೆಗೆ ಜಮಾ ಮಾಡಬೇಕು.

2) **ಹೆಚ್ಚುವರಿ ಶಾಲಾ ಕೊಠಡಿ:** 2010-11 ನೇ ಆರ್.ಟಿ.ಇ ಮತ್ತು 2011-12ನೇ ಸಾಲಿನಲ್ಲಿಯೂ ಮಂಜೂರಾಗಿರುತ್ತದೆ. ಆರ್.ಟಿ.ಇ ಅಡಿಯಲ್ಲಿ ಮಂಜೂರಾದ ಘಟಕ ವೆಚ್ಚ ರೂ.3.68 ಲಕ್ಷಗಳು. ಹಾಗೂ 2011-12ನೇ ಸಾಲಿನಲ್ಲಿ ಮಂಜೂರಾದ ಘಟಕವೆಚ್ಚವು ರೂ.5.05 ಲಕ್ಷಗಳು ಮಂಜೂರಾಗಿದ್ದರೂ, ಎರಡೂ ವರ್ಷಗಳ ಕಾಮಗಾರಿಗಳನ್ನು ಅನುಷ್ಠಾನಕ್ಕಾಗಿ ಸರಾಸರಿ ಘಟಕವೆಚ್ಚವನ್ನು ರೂ 4.60 ಲಕ್ಷಕ್ಕೆ ಮಿತಿಗೊಳಿಸಲಾಗಿದೆ. ಆದುದರಿಂದ 2010-11 & 2011-12ನೇ ಸಾಲಿನಲ್ಲಿ ಮಂಜೂರಾದ ಹೆಚ್ಚುವರಿ ಕೊಠಡಿಯ ಘಟಕವೆಚ್ಚ ರೂ.4.60 ಗಳೆಂದು ಪರಿಗಣಿಸಬೇಕು. ಇದರಲ್ಲಿ ಶೇ.3 ರಷ್ಟು ಅನುದಾನ 3ನೇ ವ್ಯಕ್ತಿ (QA &TA) ಗಾಗಿ ರೂ.13,025-00 ಕಟಾಯಿಸಿ ಉಳಿದ ಮೊತ್ತ ರೂ. 4,46,975.00-00 ಗಳನ್ನು ಎಸ್.ಡಿ.ಎಂ.ಸಿರವರ ಖಾತೆಗೆ ಜಮಾ ಮಾಡಬೇಕು.

**ಸೂಚನೆ:** ಒಂದೇ ಶಾಲೆಗೆ 2 ಕೊಠಡಿಗಳು ಮಂಜೂರಾಗಿದ್ದಲ್ಲಿ ಉನ್ನತೀಕರಿಸಿದ ಶಾಲೆಗೆ ನಿಗಧಿಪಡಿಸಿರುವ 2 ಕೊಠಡಿಗಳ ಘಟಕ ವೆಚ್ಚದಂತೆ ಕ್ರಮ ವಹಿಸುವುದು. ಒಂದೇ ಶಾಲೆಗೆ 2ಕ್ಕಿಂತಾ ಹೆಚ್ಚಿನ ಕೊಠಡಿಗಳು ಮಂಜೂರಾಗಿದ್ದಲ್ಲಿ ಜಿಲ್ಲಾ ಅಭಿಯಂತರರವರಿಂದ ಪ್ಲಾನ್ ಮತ್ತು ಎಸ್ಟಿಮೇಟ್

ಮಾಡಿಸಿ ಈ ಕಛೇರಿಗೆ ಅನುಮೋದನೆಗೆ ಸಲ್ಲಿಸಬೇಕು. ಜಿಲ್ಲಾ ಅಭಿಯಂತರರ ಹುದ್ದೆಯು ಖಾಲಿ ಇದ್ದಲ್ಲಿ, ಶಾಲೆಯಲ್ಲಿ ಕೊಠಡಿಯನ್ನು ಕಟ್ಟಲು ಇರುವ ಸ್ಥಳದ ವಿವರದೊಂದಿಗೆ ಈ ಕಛೇರಿಗೆ ಮಾಹಿತಿ ನೀಡಿದ್ದಲ್ಲಿ, ಪ್ಲಾನ್ ಮತ್ತು ಎಸ್ಟಿಮೇಟನ್ನು ಸಿದ್ದಪಡಿಸಿ ನೀಡಲಾಗುವುದು.

3) **ಮುಖ್ಯ ಶಿಕ್ಷಕರ ಕೊಠಡಿ:** ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮುಖ್ಯಶಿಕ್ಷಕರ ಹುದ್ದೆಯು ಮಂಜೂರಾಗಿದ್ದಲ್ಲಿ ಈ ಸೌಲಭ್ಯವನ್ನು ಪಡೆಯಲು ಅರ್ಹವಾಗಿರುತ್ತದೆ. ಸದರಿ ಕಟ್ಟಡದ ಅನುದಾನವನ್ನು ಬಿಡುಗಡೆ ಮಾಡುವ ಪೂರ್ವದಲ್ಲಿ ಆ ಶಾಲೆಯಲ್ಲಿ ಮುಖ್ಯ ಶಿಕ್ಷಕರ ಹುದ್ದೆ ಮಂಜೂರಾಗಿರುವುದರ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕಾಗಿದೆ. 2010-11ನೇ ಆರ್.ಟಿ.ಇ ಮತ್ತು 2011-12ನೇ ಸಾಲಿನಲ್ಲಿಯೂ ಮಂಜೂರಾಗಿರುತ್ತದೆ. ಆರ್.ಟಿ.ಇ ಅಡಿಯಲ್ಲಿ ಮಂಜೂರಾದ ಘಟಕ ವೆಚ್ಚ ರೂ.3.70 ಲಕ್ಷಗಳು ಹಾಗೂ 2011-12 ನೇ ಸಾಲಿನಲ್ಲಿ ಮಂಜೂರಾದ ಘಟವೆಚ್ಚವು ರೂ.5.05 ಲಕ್ಷಗಳು. ಎರಡೂ ವರ್ಷಗಳ ಕಾಮಗಾರಿಗಳನ್ನು ಅನುಷ್ಠಾನಕ್ಕಾಗಿ ಸರಾಸರಿ ಘಟಕವೆಚ್ಚವನ್ನು ರೂ 4.60 ಲಕ್ಷಕ್ಕೆ ಮಿತಿಗೊಳಿಸಲಾಗಿದೆ. ಆದುದರಿಂದ 2010-11& 2011-12 ನೇ ಸಾಲಿನಲ್ಲಿ ಮಂಜೂರಾದ ಮುಖ್ಯಶಿಕ್ಷಕರ ಕೊಠಡಿಯ ಘಟಕವೆಚ್ಚ ರೂ.4.60 ಗಳೆಂದು ಪರಿಗಣಿಸಬೇಕು. ಇದರಲ್ಲಿ ಶೇ.3 ರಷ್ಟು ಅನುದಾನ 3ನೇ ವ್ಯಕ್ತಿ (QA &TA) ಗಾಗಿ ರೂ13,025-00 ಕಟಾಯಿಸಿ ಉಳಿದ ಮೊತ್ತ ರೂ. 4,46,975.00-00 ಗಳನ್ನು ಎಸ್.ಡಿ.ಎಂ.ಸಿರವರ ಖಾತೆಗೆ ಜಮಾ ಮಾಡಬೇಕು.

4) **ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಗಳ ಹೆಚ್ಚುವರಿ ಕೊಠಡಿ :** 2010-11ನೇ ಆರ್.ಟಿ.ಇ ಮತ್ತು 2011-12ನೇ ಸಾಲಿನಲ್ಲಿಯೂ ಮಂಜೂರಾಗಿರುತ್ತದೆ. ಆರ್.ಟಿ.ಇ ಅಡಿಯಲ್ಲಿ ಮಂಜೂರಾದ ಘಟಕ ವೆಚ್ಚ ರೂ. 3.68 ಲಕ್ಷಗಳು. ಹಾಗೂ 2011-12ನೇ ಸಾಲಿನಲ್ಲಿ ಮಂಜೂರಾದ ಘಟವೆಚ್ಚವು ರೂ 4.60 ಲಕ್ಷಗಳು. 2010-11& 2011-12 ನೇ ಸಾಲಿನಲ್ಲಿ ಮಂಜೂರಾದ ಉನ್ನತೀಕರಿಸಿ ಶಾಲೆಗೆ 2 ಹೆಚ್ಚುವರಿ ಕೊಠಡಿಯು ಮಂಜೂರಾಗಿರುತ್ತದೆ. ಎರಡೂ ವರ್ಷಗಳ ಕಾಮಗಾರಿಗಳನ್ನು ಅನುಷ್ಠಾನಕ್ಕಾಗಿ ಸರಾಸರಿ ಘಟಕವೆಚ್ಚವನ್ನು ರೂ 9.20 ಲಕ್ಷಕ್ಕೆ ಮಿತಿಗೊಳಿಸಲಾಗಿದೆ. ಇದರಲ್ಲಿ ಶೇ.3 ರಷ್ಟು ಅನುದಾನ 3ನೇ ವ್ಯಕ್ತಿ (QA &TA) ಗಾಗಿ ರೂ.26,050-00 ಕಟಾಯಿಸಿ ಉಳಿದ ಮೊತ್ತ ರೂ. 8,93,950-00 ಗಳನ್ನು ಎಸ್.ಡಿ.ಎಂ.ಸಿರವರ ಖಾತೆಗೆ ಜಮಾ ಮಾಡಬೇಕು.

**ಸೂಚನೆ:** ಉನ್ನತೀಕರಿಸಿದ ಶಾಲೆಗಳಿಗೆ ಮಂಜೂರಾದ ಕೊಠಡಿಗಳನ್ನು ಅದೇಶಾಲೆಗೆ ಬಳಸಬೇಕು. ಪ್ರಸಕ್ತ ಶಾಲಾಕಟ್ಟಡ ಇರುವ ಪ್ರದೇಶಕ್ಕೆ ಹೊಂದಿಕೊಂಡಂತೆ ಇರುವ ಶಾಲೆಗೆ ಸಂಬಂಧಿಸಿದ ನಿವೇಶನದಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದು. ನಿವೇಶನದ ತೊಂದರೆಇದ್ದಲ್ಲಿ ಅಂತಹ ಕಾಮಗಾರಿಗಳನ್ನು ಕೇಂದ್ರ ಸರ್ಕಾರಕ್ಕೆ ಹಿಂದಕ್ಕೆ ಒಪ್ಪಿಸಬಹುದಾಗಿರುತ್ತದೆ. ಜಿಲ್ಲಾ ಹಂತದಲ್ಲಿ ಬೇರೆ ಶಾಲೆಗಳಿಗೆ ನೀಡುವ ಅಧಿಕಾರವು ಇರುವುದಿಲ್ಲ.

5) **(ಅ) ಹೆಣ್ಣುಮಕ್ಕಳ ಶೌಚಾಲಯ:** ವಾರ್ಷಿಕ ಕ್ರಿಯಾ ಯೋಜನೆಯ ಪಟ್ಟಿಯಲ್ಲಿರುವ ಶಾಲೆಗಳಿಗೆ ಮಾತ್ರವೇ ಹಣವನ್ನು ಬಿಡುಗಡೆ ಮಾಡಬೇಕಾಗಿರುತ್ತದೆ. 2010-11ನೇ ಆರ್.ಟಿ.ಇ ಮತ್ತು 2011-12ನೇ ಸಾಲಿನಲ್ಲಿಯೂ ಮಂಜೂರಾಗಿರುತ್ತದೆ. ಆರ್.ಟಿ.ಇ ಅಡಿಯಲ್ಲಿ ಮಂಜೂರಾದ ಘಟಕ ವೆಚ್ಚ ರೂ.0.25 ಲಕ್ಷಗಳು. ಈ ಕಾಮಗಾರಿ ಅನುಷ್ಠಾನಕ್ಕೆ 2010-11ನೇ ಸಾಲಿನಲ್ಲಿ ನೀಡಲಾದ ಪ್ಲಾನ್ ಮತ್ತು ಎಸ್ಟಿಮೇಟ್ ನಂತೆ ನಿರ್ಮಾಣಕಾರ್ಯವನ್ನು ಪೂರ್ಣಗೊಳಿಸುವುದು. ಇದರಲ್ಲಿ ಶೇ.3 ರಷ್ಟು ಅನುದಾನ 3ನೇ ವ್ಯಕ್ತಿ (QA &TA) ಗಾಗಿ ಯಾವುದೇ ಮೊತ್ತವನ್ನು ಕಟಾಯಿಸಬಾರದು. ಉಲ್ಲೇಖ(3)ರಂತೆ ಪ್ಲಾನ್ ಮತ್ತು ಎಸ್ಟಿಮೇಟ್ ಜಿಲ್ಲೆಗಳಿಗೆ ನೀಡಲಾಗಿದೆ.

**(ಆ)** 2011-12ನೇ ಸಾಲಿನಲ್ಲಿ ಮಂಜೂರಾದ ಹೆಣ್ಣುಮಕ್ಕಳ ಶೌಚಾಲಯದ ಘಟವೆಚ್ಚವು ರೂ.1.85 ಲಕ್ಷಗಳು. ಆಗಿದ್ದು ಈ ಕಛೇರಿಯಿಂದ ಈಗಾಗಲೇ ನೀಡಿರುವ ಪ್ಲಾನ್ ಮತ್ತು ಎಸ್ಟಿಮೇಟ್‌ನಂತೆ ನಿರ್ಮಿಸುವುದು. ಇಂತಹ ಘಟಕಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳಿಗೆ ಮಾತ್ರ ಒದಗಿಸಬೇಕೆಂದು ದಿನಾಂಕ: 03-09-2011 ರಂದು ನಡೆದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ತಿಳಿಸಲಾಗಿದೆ. ಅದರಂತೆ ಕ್ರಮವಹಿಸವುದು. ಇದರಲ್ಲಿ ಶೇ.3 ರಷ್ಟು ಅನುದಾನ 3ನೇ ವ್ಯಕ್ತಿ (QA &TA) ಗಾಗಿ ರೂ. 5550-00 ಕಟಾಯಿಸಿ ಉಳಿದ ಮೊತ್ತ ರೂ.1,79,450-00. ಗಳನ್ನು ಎಸ್.ಡಿ.ಎಂ.ಸಿರವರ ಖಾತೆಗೆ ಜಮಾ ಮಾಡಬೇಕು.

6) **ಸಾಮಾನ್ಯ ಶೌಚಾಲಯ:** 2010-11ನೇ ಆರ್.ಟಿ.ಇ ಮತ್ತು 2011-12ನೇ ಸಾಲಿನಲ್ಲಿ ಮಂಜೂರಾಗಿರುತ್ತದೆ. ಆರ್.ಟಿ.ಇ ಮತ್ತು 2011-12ನೇ ಸಾಲಿನಲ್ಲಿ ಮಂಜೂರಾದ ಘಟವೆಚ್ಚವು ರೂ.0.25 ಲಕ್ಷಗಳು. 2010-11 ನೇ ಸಾಲಿನಲ್ಲಿ ನೀಡಿರುವ ಪ್ಲಾನ್ ಮತ್ತು ಎಸ್ಟಿಮೇಟ್ ನಂತೆಯೇ ಕಾಮಗಾರಿಗಳ ಕಾರ್ಯ ಕೈಗೊಳ್ಳುವುದು. ಇದರಲ್ಲಿ ಶೇ.3 ರಷ್ಟು ಅನುದಾನ 3ನೇ ವ್ಯಕ್ತಿ (QA &TA) ಗಾಗಿ ಯಾವುದೇ ಮೊತ್ತವನ್ನು ಕಟಾಯಿಸಬಾರದು.